ಈಗಿರುವ ಆಸ್ಪತ್ರೆಯು ೬೪ ಹಾಸಿಗೆಗಳ ಆಸ್ಪತ್ರೆಯಾಗಿದೆ. ದಿನೇದಿನೇ ಇಲ್ಲಿ ಬರುವ ರೋಗಿಗಳ ಸಂಖ್ಯೆ ಹೆಚ್ಚುತ್ತಿದ್ದು, ೬೪ ಹಾಸಿಗೆಗಳು ಸಾಲದಾಗಿದೆ. ಆದ್ದರಿಂದ ಈ ಆಸ್ಪತ್ರೆಯನ್ನು ೧೦೦ ಹಾಸಿಗೆಗಳ ಆಸ್ಪತ್ರೆಯನ್ನಾಗಿ ಪರಿವರ್ತಿಸುವುದೂ ಸಹ ತುಂಬಾ ಅವಶ್ಯಕವಾಗಿದೆ. ಚಿಕಿತ್ಸೆಗೆಂದು ಈ ಆಸ್ಪತ್ರೆಗೆ ಹೋಗುವ ರೋಗಿಗಳನ್ನು ಆಸ್ಪತ್ರೆಯ ಸಿಬ್ಬಂದಿಯವರು ಅವರನ್ನು ಉಪಚರಿಸದೇ ಇಲ್ಲಸಲ್ಲದ ನೆಪಹೇಳಿ ಖಾಸಗಿ ಆಸ್ಪತ್ರೆಗಳಿಗೆ ಕಳುಹಿಸುತ್ತಿದ್ದಾರೆ. ಆದಕಾರಣ ಸರ್ಕಾರದವರು ಆಸ್ಪತ್ರೆಯನ್ನು ಸ್ಥಾಪಿಸಿರುವ ಉದ್ದೇಶವೇ ಭಗ್ನವಾಗಿದೆ. ಆದಕಾರಣ, ಸರ್ಕಾರದವರಿಂ ಇಂತಹ ಸಿಬ್ಬಂದಿಯ ಮೇಲೆ ಸೂಕ್ತ ಕ್ರಮ ಕೈಗೊಂಡು ಬಂದ ರೋಗಿಗಳಿಗೆ ಚಿಕಿತ್ಸೆ ದೊರೆಯುವಂತೆ ಮಾಡುವುದೂ ಸಹ ಅತ್ಯವಶ್ಯವಾಗಿದೆ.

ಸಾರ್ವಜನಿಕರ ಹಿತದೃಷ್ಟಿಯಿಂದ ಸರ್ಕಾರದವರು ಕೂಡಲೇ ಈ ಆಸ್ಪತ್ರೆಗೆ ಒಬ್ಬ ದಕ್ಷ ಮೆಡಿಕಲ್ ಆಫೀಸರ್ ಹಾಗೂ ಚಿಕಿತ್ಸೆಗೆ ಅವಶ್ಯಕವಿರುವ ಔಷಧಿ ಹಾಗೂ ಸಲಕರಣೆಗಳನ್ನು ಪೂರೈಸಬೇಕೆಂದು ಸರ್ಕಾರದವರನ್ನು ಒತ್ತಾಯಿಸಲು ಈ ಸೂಚನೆ ನೀಡಲಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮಂತ್ರಿಗಳು).—ಮಾನ್ಯ ಸದಸ್ಯರು ಇಲ್ಲಿ ಸಾಕಷ್ಟು ಔಷಧಿಗಳು ಇಲ್ಲವೆಂದು ಹೇಳಿದ್ದಾರೆ. ನಾನು ಸಂಬಂಧಪಟ್ಟ ಆರೋಗ್ಯ ಮಂತ್ರಿಗಳಿಗೆ ತಿಳಿಸಿ, ತಕ್ಷಣ, ಕಾರ್ಯಕ್ರಮ ತೆಗೆದುಕೊಳ್ಳುವಂತೆ ಹೇಳುತ್ತೇನೆ.

(೨) ರಾಜ್ಯದಲ್ಲಿ ನಾಲ್ಕು ಟೆಕ್ಸ್‌ಟೈಲ್ ಮಿಲ್ಲುಗಳು ಮುಚ್ಚಿರುವ ಬಗ್ಗೆ

ಶ್ರೀ ಎಂ. ಪಂಪಾಪತಿ.—ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಂಡು ಈ ಕೆಳಗಿನ ವಿಷಯದ ಕುರಿತು ಅವರ ಗಮನ ಸೆಳೆಯುತ್ತೇನೆ.

ರಾಜ್ಯದಲ್ಲಿ ನಾಲ್ಕು ಟೆಕ್ಸ್‌ಟೈಲ್ಸ್ ಮಿಲ್ಲುಗಳು (ಶಂಕರ ಟೆಕ್ಸ್‌ಟೈಲ್ ಮಿಲ್ ದಾವಣಗೆರೆ, ನಂದಿಹಸವಿ ಜವಳಿ ಗಿರಣಿ, ನರಗುಂದ, ಸಹಕಾರಿ ನೂಲಿನ ಗಿರಣಿ, ವಿಜಾಪುರ, ಕೆ.ಆರ್.ಮಿಲ್ಸ್, ಮೈಸೂರು) ಕೆಲಸವನ್ನು ಅನಧಿಕೃತವಾಗಿ ನಿಲ್ಲಿಸಿ ಸುಮಾರು ೧೦,೦೦೦ ಕೆಲಸಗಾರರಿಗೆ ಕೆಲಸವಿಲ್ಲದಂತೆ ಮಾಡಿ, ಎಲ್ಲರನ್ನೂ ನಿರುದ್ಯೋಗಕ್ಕೆ ತಳ್ಳಿದ್ದಾರೆ. ಈ ವಿಷಯವಾಗಿ ಅನೇಕ ಮನವಿಗಳನ್ನು ಮಾಡಿಕೊಂಡಾಗ್ಯೂ ಮತ್ತು ಸಂಬಂಧಪಟ್ಟ ಮಂತ್ರಿಗಳಿಗೂ ಮತ್ತು ಇಲಾಖೆಯ ಮಂತ್ರಿಗಳ ಗಮನಕ್ಕೆ ತಂದರೂ ಈವರೆಗೆ ಯಾವುದೇ ಪ್ರಯೋಜನವಾಗಿರುವುದಿಲ್ಲ. ಕಳೆದ ಸುಮಾರು ೧೮ ತಿಂಗಳುಗಳಿಂದ ಕೆಲಸಗಾರರಿಗೆ ಕೆಲಸ ಇಲ್ಲದಿರುವುದರಿಂದ ಕಾನೂನು ಪ್ರಕಾರ ಲೇ ಆಫ್ ಪರಿಹಾರ ಕೊಡಬೇಕಾಗಿತ್ತು, ಅದನ್ನು ಕೊಟ್ಟಿಲ್ಲ. ಮೇಲೆ ಕಾಣಿಸಿದ ಮಿಲ್ ಮಾಲೀಕರು ಸರ್ಕಾರದ ಕಾನೂನು ಕಟ್ಟಳೆಗಳನ್ನು ಗಾಳಿಗೆ ತೂರಿ ಸ್ವಚ್ಛಂದವಾಗಿದ್ದಾರೆ. ಈ ವಿಷಯದಲ್ಲಿ ತಾವು ಸಂಬಂಧಪಟ್ಟ ಮಾಲೀಕರು ಅಧಿಕಾರಿಗಳು ಮತ್ತು ಮಂತ್ರಿಗಳು ಕಾರ್ಮಿಕ ಸಂಘದ ಮುಂದಾಳುಗಳನ್ನು ಕರೆಯಿಸಿ, ಕೆಲಸ ಪ್ರಾರಂಭಿಸಲು ಮತ್ತು ಕೈಗಾರಿಕೆಗಳನ್ನು ಮುಚ್ಚಿರುವ ದಿನಗಳಲ್ಲಿ ಪರಿಹಾರಕೊಡಿಸಿ ರಾಜ್ಯದಲ್ಲಿ ಕಾರ್ಮಿಕ ರಂಗದಲ್ಲಿ ಶಾಂತಿಯನ್ನು ಕಾಪಾಡಿಕೊಂಡು ಬರಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್(ಕಾರ್ಮಿಕ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ದಾವಣಗೆರೆ ಟೆಕ್ಸ್‌ಟೈಲ್ಸ್ ಮಿಲ್ ಮುಚ್ಚಿರುವ ಬಗ್ಗೆ ಮತ್ತು ಪ್ರಾರಂಭಿಸುವ ಬಗ್ಗೆ ಹೇಳಿದ್ದಾರೆ. ಇದರ ಬಗ್ಗೆ ಈಗಾಗಲೇ ನಾನು ಮತ್ತು ಪಂಪಾಪತಿ ಇಬ್ಬರೂ ಸೇರಿ ಚರ್ಚೆಮಾಡಿದ್ದೇವೆ. ಅದು ಮಾನ್ಯ ಸದಸ್ಯರಿಗೂ ಗೊತ್ತಿದೆ. ನಂದಿಹಸವಿ ಜವಳಿ ಗಿರಣಿ ನರಗುಂದ, ಇದರ ಬಗ್ಗೆಯೂ ಸಹ ಈಗಾಗಲೇ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇನೆ. ಇನ್ನು ಸಹಕಾರಿ ನೂಲಿನ ಗಿರಣಿ, ವಿಜಾಪುರ ಈ ಮಿಲ್ ಬಗ್ಗೆಯೂ ನಾನು ಈಗಾಗಲೇ ಸಹಕಾರ ಮಂತ್ರಿಗಳಲ್ಲಿ ಹೇಳಿದ್ದೇನೆ. ಇದು ಇಷ್ಟರಲ್ಲೇ ಸಾಲ್ವುವಾಗುತ್ತದೆ. ಇನ್ನು ಕೆ ಆರ್.ಮಿಲ್ಸ್, ಮೈಸೂರು ಈ ಮಿಲ್ ಬಗ್ಗೆ ನಿನ್ನೆಯ ದಿವಸ ನಾನೂ ಮತ್ತು ಕೈಗಾರಿಕೆ ಸಚಿವರ ಛೇಂಬರಿನಲ್ಲಿ ಮೀಟಿಂಗ್ ಮಾಡಿದೆವು. ಅವರನ್ನೂ ಸಹ ಕರೆಸಿದ್ದೆವು. ಅವರು ಇದರ ಬಗ್ಗೆ ರಿಲೀಫ್ ಕೇಳಿದ್ದಾರೆ. ಇದರ ಬಗ್ಗೆ ಈಗಾಗಲೇ ಪರಿಶೀಲನೆ ಮಾಡುತ್ತಿದ್ದೇವೆ. ಇದನ್ನು ಆದಷ್ಟು ಜಾಗ್ರತೆಯಾಗಿ ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ಪಂಪಾಪತಿ.—ಇಲ್ಲಿರುವ ನೌಕರರು ಒಂದು, ಒಂದೂವರೆ ವರ್ಷದಿಂದಲೂ ನಿರುದ್ಯೋಗಿಗಳಾಗಿದ್ದಾರೆ. ಆದಷ್ಟು ಜಾಗ್ರತೆ ಪ್ರಾರಂಭಮಾಡಿಸುತ್ತೀರಾ?

ಅಧ್ಯಕ್ಷರು.—ಸಿಸಿಳರ ಮೇರೆಗೆ ಮತ್ತೆ ಚರ್ಚೆಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಭೂಪತಿ.—ಅವರು ತಪ್ಪು ಮಾಹಿತಿ ಕೊಟ್ಟರೆ ನಾವು ಸುಮ್ಮನೆ ಕೂರಬೇಕೇನು ?

ಅಧ್ಯಕ್ಷರು.—ತಾವು ಕೂಡ್ರಿ,

ಶ್ರೀ ಹೆಚ್. ಬಿ. ಕೃಷ್ಣಪ್ಪ.—ಸದಸ್ಯರು ಹಾಜರಿಲ್ಲ.

ಗಮನ ಸೆಳೆಯುವ ಸೂಚನೆ

ಕುದುರೆಮುಖ ಕಬ್ಬಿಣ ಕಾರ್ಖಾನೆಯ ನೌಕರರ ಮೇಲೆ ಪೋಲೀಸರಿಂದ ಲಾಠಿ ಚಾರ್ಜ್

ಶ್ರೀ ಎನ್. ಎಂ. ಆಧ್ಯಾಂತಾಯ.—ಮಾನ್ಯ ಅಧ್ಯಕ್ಷರೆ, ಶಾಂತಿಯುತವಾಗಿ ಮೆರವಣಿಗೆ ನಡೆಸುತ್ತಿದ್ದ ಕುದುರೆಮುಖ ಕಬ್ಬಿಣದ ಆದಿಗು ಕಂಪನಿಯ ಕಾರ್ಮಿಕರ ಮೇಲೆ ಆರಕ್ಷಕರು ನಡೆಸಿದ ಲಾಠಿ ಪ್ರಹಾರದ ಬಗ್ಗೆ ಒಳಾಡಳಿತ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ (ಒಳಾಡಳಿತ ಮಂತ್ರಿಗಳು).—ಈ ಬಗ್ಗೆ ನಾನು ಒಂದು ಹೇಳಿಕೆಯನ್ನು ನೀಡುತ್ತೇನೆ. ಹೇಳಿಕೆ ಈ ರೀತಿ ಇದೆ.

ದಿನಾಂಕ ೩–೯–೮೫ರಂದು ಬೆಳ್ಳಿಗೆ ಸುಮಾರು ೯–೧೫ರ ಸಮಯದಲ್ಲಿ ಕುದುರೆ ಮುಖದ ಕಾರ್ಯಾಗಾರದಲ್ಲಿ ಕೆಲಸ ಮಾಡುತ್ತಿದ್ದ ಜೂನಿಯರ್ ಮೆಕಾನಿಕ್ ಗ್ರೇಡ್–೨, ಕೆಲಸಗಾರನಾದ ಶ್ರೀ ಬಿ.ಸಿ. ಲಕ್ಷ್ಮೀಕಾಂತ, ವಯಸ್ಸು ೨೪ ವರ್ಷ, ಇವರು ಕಾಂಸೆಂಟ್ರೇಟರ್ ಪ್ಲಾಂಟಿನಲ್ಲಿ ಕೆಲಸ ಮಾಡುತ್ತಿದ್ದು ಸ್ಲರ್ರಿ ಪಂಪ್ ರಿಪೇರಿ ಮಾಡುತ್ತಿದ್ದಾಗ ಆ ಪಂಪಿಗೆ ಆಧಾರವಾಗಿದ್ದ ಒಂದು ಕಬ್ಬಿಣದ ಸರಳು ಹಾರಿ ಅವರ ಮುಖದ ಬಲಭಾಗಕ್ಕೆ ತಾಗಿ ಅವರ ಕೆನ್ನೆಗೆ ತೀವ್ರವಾದ ಗಾಯವುಂಟಾಯಿತು. ಗಾಯಾಳುವನ್ನು ಕೂಡಲೇ ಕುದುರೆ ಮುಖ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದೊಯ್ಯಲಾಯಿತು. ಆದರೆ ಅವರು ಬೆಳಿಗ್ಗೆ ಸುಮಾರು ೯–೪೫ರ ಹೊತ್ತಿಗೆ ಮೃತಪಟ್ಟರು. ಡಾ॥ ಸುಧಾಕರ್ ಎಂಬುವರಿಂದ ತಿಳಿಯಲಾದ ಸಮಾಚಾರದ ಆಧಾರದ ಮೇರೆಗೆ ಕುದುರೆ ಮುಖದ ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ರವರು ಒಂದು ಮೊಕದ್ದಮೆಯನ್ನು ಅಪರಾಧ ಸಂಖ್ಯೆ ೪–೮೫ ಯಂಡಿಆರ್ ಕಲಂ ೧೭೪ ಅಪರಾಧ ಪ್ರಕ್ರಿಯಾ ಸಂಹಿತೆ ಮೇರೆಗೆ ದಾಖಲು ಮಾಡಿಕೊಳ್ಳಲಾಯಿತು. ಹಿರೇಬಯಲು ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಗಳಿಂದ ಶವ ಪರೀಕ್ಷೆ ನಡೆಸಲಾಯಿತು. ಮೃತನ ಸಂಬಂಧೀಕರು ಕುದುರೆ ಮುಖಕ್ಕೆ ಬಂದಿರುತ್ತಾರೆ. ಕುದುರೆ ಮುಖದ ಕಾರ್ಯಾಗಾರದಲ್ಲಿ ಸುರಕ್ಷತೆ ಮತ್ತು ಮುಂಜಾಗ್ರತೆ ಕ್ರಮವನ್ನು ತೆಗೆದುಕೊಳ್ಳುವ ಬಗ್ಗೆ ಮತ್ತು ಸಂಬಂಧಪಟ್ಟ ಇಂಜಿನೀಯರನ್ನು ಅಮಾನತ್ತಿನಲ್ಲಿಡಲು ಒತ್ತಾಯಿಸಿ ಕಾರ್ಮಿಕರು ಚಳುವಳಿ ಹೂಡಿದ್ದಾರೆ.

೨. ಕಾರ್ಮಿಕರು ಆಸ್ಪತ್ರೆಯ ಆವರಣದಲ್ಲಿ ಪ್ರವೇಶಿಸಿ ವಿದ್ವಂಸಕ ಕೃತ್ಯಗಳಲ್ಲಿ ತೊಡಗಿದರು. ಕುದುರೆ ಮುಖ ಕಂಪನಿ ಕೆಲಸಗಾರರಿಗೆ ಸೇರಿದ ಮೂರು ಮೋಟಾರು ಕಾರು ಎರಡು ಸ್ಕೂಟರ್ ಒಳಗೊಂಡಂತೆ ಏಳು ವಾಹನಗಳು ಜಖಂಗೊಳಿಸಲ್ಪಟ್ಟವು. ಈ ಕಾರ್ಮಿಕರು ಏಳು ಜನ ಅಧಿಕಾರಿಗಳ ಮೇಲೂ ಸಹ ಕೈ ಮಾಡಿದರು. ಚಿಕ್ಕಮಗಳೂರು ಡಿವೈಎಸ್‌ಪಿಯವರು ಸ್ಥಳಕ್ಕೆ ಧಾವಿಸಿದರು. ಮೃತನ ಶರೀರವನ್ನು ಅವನ ಸಂಬಂಧಿಗಳ ವಶಕ್ಕೆ ಒಪ್ಪಿಸಿ ಭದ್ರಾವತಿಗೆ ಕಳುಹಿಸಲಾಯಿತು. ಪೊಲೀಸರು ಬೆತ್ತ ಪ್ರಹಾರ ಮಾಡಿದರು. ಆದರೂ ಯಾವ ಪ್ರಯೋಜನವೂ ಆಗದಿದ್ದರಿಂದ ಪರಿಸ್ಥಿತಿಯನ್ನು ಹತೋಟಿಗೆ ತರಲು ೯ ಅಶ್ರುವಾಯು ಶೆಲ್ಲುಗಳನ್ನೂ ಹಾಗೂ ೩ ಹ್ಯಾಂಡ್ ಗ್ರೆನೇಡುಗಳನ್ನೂ ಸಿಡಿಸಿದರು. ಜನರಲ್ ಮ್ಯಾನೇಜರ್‌ರವರಾದ ಶ್ರೀ ಕೆ.ಸಿ. ಭಟ್‌ರವರು ಕಾರ್ಖಳ ಸಬ್ ಇನ್ಸ್‌ಪೆಕ್ಟರ್‌ರವರೊಂದಿಗೆ ಕುದುರೆ ಮುಖಕ್ಕೆ ಬಂದಾಗ ಆಗಲೇ ರಾತ್ರಿಯಾಗಿತ್ತು. ಶ್ರೀ ಭಟ್‌ರವರ ಮೇಲೆ ಕಾರ್ಮಿಕರು ಹಲ್ಲೆ ಮಾಡಿದರು. ಮತ್ತು ಸಬ್ ಇನ್ಸ್‌ಪೆಕ್ಟರವರನ್ನೂ ಸಹ ಗಾಯಗೊಳಿಸಿದರು. ಈ ಗಲಭೆಯಲ್ಲಿ ೫ ಜನ ಪೋಲೀಸ್ ಇನ್ಸ್‌ಪೆಕ್ಟರ್‌ಗಳು ಹತ್ತು ಜನ ಪೋಲೀಸ್ ಸಿಬ್ಬಂದಿಯವರು ಮತ್ತು ಇಬ್ಬರು ಸಿ.ಐ.ಎಸ್.ಎಫ್. ಕೆಲಗಾರರು ಗಾಯಗೊಂಡಿರುತ್ತಾರೆ. ೪೨ ಕಾರ್ಮಿಕರನ್ನು ದಸ್ತಗಿರಿ ಮಾಡಿ ಅವರನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಹಿಂಸಾತ್ಮಕ ಕೃತ್ಯಗಳಲ್ಲಿ ತೊಡಗಿ ಸಣ್ಣಪುಟ್ಟ ಗಾಯಗಳಾಗಿದ್ದ ೮ ಜನ ಕಾರ್ಮಿಕರನ್ನು ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ಮಾಡಿಸಲಾಯಿತು.